## ಮಾತು-ಕತೆ

ಮೊದಲ ಕಥೆ ಬರೆದಾಗ ನನಗೆ ಮೂವತ್ತು ವರ್ಷ. ಆ ಕಥೆಗೆ ಸಿಕ್ಕ ಪ್ರತಿಕ್ರಿಯೆ ಬರವಣಿಗೆ ಮುಂದುವರಿಸುವ ಆತ್ಮವಿಶ್ವಾಸ ತಂದುಕೊಟ್ಟಿತು. ನಾನು ಬರೆದದ್ದನ್ನು ಇನ್ನೊಬ್ಬರು ಓದಬಹುದು ಎನ್ನುವ ಆತ್ಮವಿಶ್ವಾಸ ಉಂಟಾಯಿತು.

ಮಾತಿಗಿಂತಲೂ ಬರವಣಿಗೆ ನನಗೆ ಇಷ್ಟ. ಕಾಲೇಜು ದಿನಗಳಲ್ಲಿ ಪ್ರಬಂಧ ಸ್ಪರ್ಧೆಗಳಲ್ಲಿ ಬಹುಮಾನ ಬರುತ್ತಿತ್ತು, ಡಿಬೇಟ್‌ನಲ್ಲಿ ಅಷ್ಟಕ್ಕಷ್ಟೆ. ಬರವಣಿಗೆಯೇ ನನ್ನ ಮಾಧ್ಯಮ ಅನ್ನಿಸಿತು.

● **ನಿಮ್ಮ ಬರವಣಿಗೆಯ ಅಭ್ಯಾಸ ಯಾವ ಬಗೆಯದು?**

ವಿವೇಕ ಶಾನಭಾಗರ 'ನಿರ್ವಾಣ' ಕಥೆಯನ್ನು ನಾಟಕವಾಗಿ ರೂಪಾಂತರಿಸಿರುವೆ. ಈ ರೂಪಾಂತರದ ಸಂದರ್ಭದಲ್ಲಿ ವಿವೇಕ್ ಯಾವ ಬಗೆಯ ಬರಹಗಾರ, ಅವರ ಶಕ್ತಿ ಯಾವುದು, ನನ್ನ ಹಾಗೂ ಅವರ ನಡುವಿನ ವ್ಯತ್ಯಾಸ – ಇವೆಲ್ಲ ತಿಳಿಯುತ್ತಾ ಹೋದವು. ಕವಿತೆಗಳನ್ನು ಬರೆದಿರುವೆ. ಬಿಡುವು ಸಿಕ್ಕಾಗಲೆಲ್ಲ ಇಷ್ಟವಾದ ಇಂಗ್ಲಿಷ್ ಕವಿತೆ, ಕಥೆ–ಕಾದಂಬರಿಗಳನ್ನು ಅನುವಾದಿಸುತ್ತೇನೆ. ಈ ಅನುವಾದ, ರೂಪಾಂತರಗಳು ನಾನೊಬ್ಬ ಬರಹಗಾರನಾಗಿ ಮತ್ತೊಬ್ಬ ಲೇಖಕನ ವಿಶ್ವದೊಳಗೆ ಪ್ರವೇಶ ಪಡೆಯುವ ರೀತಿ. ಕಥೆಯನ್ನು ಓದುವುದು, ಅದನ್ನು ಅರ್ಥ ಮಾಡಿಕೊಳ್ಳುವುದು ಒಂದು ಮಾರ್ಗ. ಆದರೆ, ಕಥೆಗಾರನ ಲೋಕದೊಳಗೆ ಪ್ರವೇಶ ಪಡೆಯಲು ಅನುವಾದ ಅಥವಾ ಕೃತಿಯ ಪುನರ್ ರಚನೆಯಿಂದ ಬೇರೆಯದೇ ಆದ ಸಾಧ್ಯತೆ. ಮಾರ್ಕೇಸ್‌ನ ಸುಮಾರು ಕಥೆಗಳನ್ನು ನನಗಾಗಿಯಷ್ಟೇ ಅನುವಾದಿಸಿಕೊಂಡಿದ್ದೇನೆ. ಇವೆಲ್ಲ ಅಭ್ಯಾಸದ ರೀತಿಯಲ್ಲಿ, ದಿನವೂ ಜಿಮ್‌ನಲ್ಲಿ ಓಡಾಡಿದಂತೆ. ಪೆರುಮಾಳ್ ಮುರುಗನ್‌ರ 'ಅರ್ಧ ನಾರೀಶ್ವರ' ಕೃತಿಯನ್ನು ಓದಿದಾಗ, ಅದನ್ನು ಇಂಗ್ಲಿಷ್‌ಗೆ ಅನುವಾದಿಸಿದರೆ ಕೃತಿಯನ್ನು ಇನ್ನಷ್ಟು ಆಳವಾಗಿ ಅನುಭವಿಸಬಹುದು ಎನ್ನಿಸಿತು.

ಕಟ್ಟಿ ಬಿಚ್ಚುವುದು, ಬರವಣಿಗೆಯೊಂದಿಗೆ ನಡೆಯುವ ಪ್ರಕ್ರಿಯೆ. ಕೆಲವು ಬ್ಲಾಕ್‌ಗಳನ್ನು ಇಟ್ಟುಕೊಂಡು ಬೇರೆ ಬೇರೆ ರೀತಿಯಲ್ಲಿ ಕಟ್ಟುವುದರಲ್ಲಿ ನನಗೆ ಆಸಕ್ತಿ.

● **ಸಮಕಾಲೀನ ಕನ್ನಡ ಸಾಹಿತ್ಯ ಸಂದರ್ಭವನ್ನು ಗಮನಿಸುವಾಗ ನಿಮಗೆ ಏನನ್ನಿಸುತ್ತದೆ?**

ಇವತ್ತಿನ ಕನ್ನಡ ಸಾಹಿತ್ಯವನ್ನು ನೋಡಿದಾಗ ನಿರಾಶೆ ಅನ್ನಿಸೋದು ಇಲ್ಲಿನ ಗುಂಪುಗಳನ್ನು ನೋಡಿದಾಗ. ನನಗೆ ಬೇಕಾದ ಪುಸ್ತಕ ಅಥವಾ ಒಂದು ಪ್ರಕಾಶನದ ಪುಸ್ತಕ ಬೇಕೆಂದರೆ ನಿರ್ದಿಷ್ಟ ಪುಸ್ತಕದ ಅಂಗಡಿಗೇ ಏಕೆ ಹೋಗಬೇಕು? ನಾನು ಬರೆದದ್ದನ್ನು ಕೆಲವರು ಓದಿ ಪ್ರತಿಕ್ರಿಯೆ ಕೊಟ್ಟರೆ ಸಾಕು ಎಂದು ಬಯಸುವುದು ತೀರಾ ನಿರಾಶಾದಾಯಕ. ನನ್ನ ಪುಸ್ತಕಗಳನ್ನು ಇಂಥವರು ಓದಿದರೆ ಸಾಕು, ಇಂಥವರು ಪ್ರತಿಕ್ರಿಯಿಸಿದರೆ ಸಾಕು ಎಂದು ಚೌಕಟ್ಟು ಹಾಕಿಕೊಳ್ಳುವುದು ನನಗೆ ಸಮಸ್ಯೆ ಅನ್ನಿಸುತ್ತದೆ. ಯಾವುದಾದರೂ ಕೃತಿ ನಮಗೆ ಇಷ್ಟವಾಗದೆ ಹೋದರೆ ಹೇಳುವುದರಲ್ಲಿ ಯಾವ ಸಮಸ್ಯೆಯೂ ಇಲ್ಲ. ಆದರೆ ಯಾವುದಾದರೂ ಲೇಖಕನ ಕೃತಿಯನ್ನು ಮುಟ್ಟುವುದೇ ಇಲ್ಲ ಎನ್ನುವ ಮನೋಭಾವ ಕಷ್ಟ.

✿